

# ಕರಗುವುದು ಕಾರ್ಮುಗಿಲು

■ ಕೆ.ವಿ.ರಾಜಲಕ್ಷ್ಮಿ

ದಿವಾನದಲ್ಲಿ ಮಲಗಿದ್ದಲ್ಲೇ ಟಿವಿ ರಿಮೋಟ್ ಒತ್ತುತ್ತಿದ್ದೆ. ಸಿಗುವ ಒಂದು ಭಾನುವಾರ ಒಮ್ಮೊಮ್ಮೆ ಒಂದು ಚಾನೆಲ್ ನಲ್ಲೂ ಒಳ್ಳೆಯ ಕಾರ್ಯಕ್ರಮ ಸಿಗದು. ಇದಕ್ಕೆ ವಿರೋಧವಾಗಿ ಮಗದೊಮ್ಮೆ ಎರಡು ಮೂರು ಕಡೆ ನೋಡಲೇಬೇಕಾದಂತಹ ರೋಚಕ, ರಂಜನೀಯ ಪ್ರೋಗ್ರಾಮ್ ಗಳು. ಎಲ್ಲವನ್ನೂ ಏಕಕಾಲದಲ್ಲಿ ಒಂದೇ ಬಾರಿಗೆ ನೋಡಲಾಗದು. ಸರಳ ಭೌತಶಾಸ್ತ್ರದ ನಿಯಮ ಸ್ವಿಚ್ ಓವರ್ ಮಾಡೋಣವೆಂದರೆ ಪೈಪೋಟಿಯಂತೆ ಜಾಹೀರಾತೂ ಒಂದೇ ಸಮಯದಲ್ಲಿ. ಛೇ, ತಲೆ ಸಿಡಿಯತೊಡಗಿತು. ಒಂದು ತೊಟ್ಟು ಕಾಫಿ ಸ್ವಲ್ಪ ಹಾಯೆನಿಸೀತು ಎಂದುಕೊಂಡು ಅಡುಗೆ ಮನೆಗೆ ನಡೆದೆ. ಅಷ್ಟರಲ್ಲೇ ಮೊಬೈಲ್ ರಿಂಗಣಿಸಿತು. ಮಂಜುಲತ ಅಕ್ಕ.

'ಹೇಳು ಮಂಜು' ಎಂದೆ.

'ಮಂದಾರ ಆಸ್ಪತ್ರೆಲಿದ್ದಾಳೆ..ಸೀರಿಯಸ್'

ನಂಬಲಾಗಲಿಲ್ಲ

'ಯಾವಾಗ್ಲೀ? ನನಗೇನು ಗೊತ್ತಿಲ್ಲ'

ನನಗರಿಯದಂತೆ ಮೆಲ್ಲನೆ ನಡುಕ ಉಂಟಾಯಿತು.

'ನನಗೂ ಇವತ್ತೇ ಗೊತ್ತಾಗಿದ್ದು ..'

'ಯಾವ ಆಸ್ಪತ್ರೆ'

'ಎಸ್‌ಕೆ'

'ಸರಿ ನಾನು ಈಗಲೇ ಹೊರಟೆ'

ಕರೆ ಮುಗಿಸಿದೆ.

'ಏನಾಯ್ತು... ' ಮಗ ಅಹಸ್ಕರ ನನ್ನಲ್ಲಾದ ಬದಲಾವಣೆಗೆ ಗಾಬರಿಯಾಗಿದ್ದ.

'ಮಂದಾರ **hospitalised** .. ನಾನು ಈಗಲೇ ಹೋಗಬೇಕು, ಮಂಜು ಕರೆ ಮಾಡಿದ್ಲು'

'**relax** ಅಮ್ಮ, ಹೋಗೋಣವಂತೆ, ನೀನು ಕೂತ್ಕೋ, ನಾನೇ ಕಾಫಿ ಬೆರೆಸ್ತೀನಿ' ನನ್ನನ್ನು ಬಲವಂತವಾಗಿ ಅಡುಗೆ ಮನೆಯಿಂದ ಹೊರನಡೆಸಿದ.

'ಮಂದಾರ ಸೀರಿಯಸ್ ಊಹಿಸಿಕೊಳ್ಳಲು ಸಾಧ್ಯವಿಲ್ಲ'

'ಅಹಸ್ ಬಹಳ ಕಷ್ಟವಾಗ್ತಿದೆ ಕಣೋ'

ಅವನು ಮಾಡಿಕೊಟ್ಟ ಕಾಫಿ ಗುಟುಕರಿಸುತ್ತ ತೊದಲಿದೆ. ತಡ ಮಾಡದೆ ಕೈಚೀಲಕ್ಕೊಂದಷ್ಟು ದುಡ್ಡು ನೀರಿನ ಬಾಟಲಿ ಇರಿಸಿ ಅಣಿಯಾದೆ.

'ಎಲ್ಲಿದೆಯಂತೆ ಆಸ್ಪತ್ರೆ?'

'ನನಗೂ ಸರಿಯಾಗಿ ಗೊತ್ತಿಲ್ಲ.. ನಮ್ಮ ಮನೆಯಿಂದ ಎರಡು ಮೂರು ಕಿಲೋಮೀಟರು ಇರಬೇಕು ಹತ್ತಿರ ಯಾವುದೋ ಸ್ಕೂಲ್ ಇದೆ ಅಂತ ಕೇಳಿದ್ದ ನೆನಪು.. ತಡಿ ಮಂಜುನೇ ಕೇಳ್ತೀನಿ..' ಎಂದು ಮೊಬೈಲ್ ತೆಗೆದೆ.

'ಬೇಡ ಬಿಡಮ್ಮ ಜಿಪಿಎಸ್ ಹಾಕೊಳ್ತೀನಿ' ಮಗ ತಡೆದ.

ತಂತ್ರಜ್ಞಾನ ಅದೆಷ್ಟು ಮುಂದುವರೆದಿದೆ!

'ಹೂಂ ಗೊತ್ತಾಯ್ತು ಬಾ... ಅಲ್ಲಿಂದ ಹೊರಡಬೇಕಾದರೆ ನನಗೊಂದು ಕಾಲ್ ಮಾಡು ಪಿಕ್ ಮಾಡ್ತೀನಿ'

ಮುಂದಿನ ಹತ್ತು ನಿಮಿಷದಲ್ಲಿ ಆಸ್ಪತ್ರೆಯಲ್ಲಿದ್ದೆ.

ರಿಸೆಪ್ಷನ್ ನಲ್ಲಿ ಮಂದಾರಳ ಬಗೆಗೆ ಕೇಳಿದೆ.

'ಐಸಿಯು ಮೂರನೇ ಮಹಡಿ' ಎಂದಾಗ ಒಂದು ಥ್ಯಾಂಕ್ಸ್ ಎಸೆದು ಲಿಫ್ಟ್ ಬಳಿ ಹೋದೆ.

ನನ್ನಂತೆ ಇನ್ನು ನಾಲ್ಕು ಮಂದಿ ಇದ್ದರು.

ಬಾಗಿಲು ತೆರೆಯುತ್ತಿದ್ದಂತೆ ಒಳಗೆ ಹೋಗಿ 'ಮೂರು' ಎಂದೆ. ಇನ್ಯಾರೋ 'ನಾಲ್ಕು' ಎಂದರು. ಬಟನ್ ಬಳಿ ಇದ್ದವರು ಅಂಕಿಗಳನ್ನು ಒತ್ತಿದರು.

ದಿಡೀರ್ ಅಂತ ಲಿಫ್ಟ್ ಬಿದ್ದು ಹೋದರೆ?

ಕೆಟ್ಟ ಲಹರಿ, ಛೇ, ಬರೀ ನೆಗೆಟಿವ್ ಥಾಟ್ಸ್..

'ಥರ್ಡ್ ಫ್ಲೋರ್'

ದಡಬಡಿಸಿ ಇಳಿದೆ

ಎರಡು ಹೆಜ್ಜೆ ಹಾಕುವಷ್ಟರಲ್ಲಿ ಮಂಜುಲತ, ಮಾಧವಿ ಕಂಡರು. ಅವರಿಬ್ಬರ ಮಧ್ಯೆ ಕುಳಿತೆ.

'ನೋಡು, ನಿನ್ನ ಫ್ರೆಂಡ್ ಹೇಗಾಗಿದ್ದಾಳೆ .. '

ಮಂಜು ಹೇಳುವಾಗ ನನಗೆ ಗಿಲ್ಟ್ ಅನ್ನಿಸಿತು.

'ನಿನ್ನೆ ಅಡ್ಮಿಟ್ ಆಗಿದ್ದಾಳೆ; ಯಾರಿಗೂ ಹೇಳಿಲ್ಲ ಅವನು..'

ಅವನು ಎಂದರೆ ಮಂದಾರಳ ಮಗ, ಸುಮುಖ.

ಸಿಟ್ಟು ಬಂದಿತು.

'ಅವರ ಮನೆಯಿಂದ ಐದನೇ ಮನೆ ನಮ್ಮದು ಹೇಳಲಾಗಲಿಲ್ಲವೇ? ಹೋಗಲಿ ನಾನು ಬೇಡ ನಿಮಗಾದರೂ ತಿಳಿಸಬಾರದಿತ್ತೆ?' ಬೇಸರಿಸಿಕೊಂಡೆ.

'ಸರಿ ಬಿಡು ಈಗ ನೋಡಬಹುದಾ?'

'ಇಲ್ಲ 5ಕ್ಕೆ ಬಿಡ್ತಾರೆ, ಪ್ರಜ್ಞೆ ಇಲ್ಲ ಲೈಫ್ ಸಪೋರ್ಟ್ ನಲ್ಲಿದ್ದಾಳೆ. ಅಲ್ಲಿ ತನಕ ಕಾಯಲೇಬೇಕು'

ಮೌನ ಕೊಲ್ಲುತ್ತಿತ್ತು ನಾನೇ ಶುರು ಮಾಡಿದೆ.

'ನಿಮ್ಮ ತಂಗಿ ಜೊತೆ ಮಾತಾಡಿ ಇಪ್ಪತ್ತು ದಿನಗಳ ಸಮೀಪ' ತಲೆ ತಗ್ಗಿಸಿದೆ.

'ಗೊತ್ತಾಯ್ತು ಮೀರಾ , ಅದನ್ನು ತಲೆಗೆ ಹಚ್ಚಿಕೊಂಡಿದ್ದಾಳೆ. ಕಳೆದ ವಾರ ನಮ್ಮ ಮನೆಗೆ ಬಂದು ಅತ್ತುಕೊಂಡಿದ್ದಳು ನೀನು ಮಾತು ಬಿಟ್ಟಿದ್ದೀ ಅಂತ ಹೇಳ್ಕೊಂಡು..'

'ಯಾಕೆಂತ ಹೇಳಲಿಲ್ವ .. ಮಗನ ಕಿತಾಪತಿ ಹೊಟ್ಟೇಲಿ ಹಾಕ್ಕೊಳ್ಳೋದು ಅಲ್ದೆ ನನ್ನ ಹತ್ತಿರ ಅವನನ್ನೇ ವಹಿಸಿಕೊಂಡ್ಲು. ಅದಕ್ಕೆ ನಾನೆ ದೂರ ಇದ್ಬಿಟ್ಟೆ. ಮಂದಾರ ಕಷ್ಟಪಡೋದನ್ನು ನೋಡೊಕ್ಕಾಗೊಲ್ಲ ಮಂಜು, ಎಲ್ಲದಕ್ಕೂ ಒಂದು ಮಿತಿ ಇರುತ್ತೆ ಅದನ್ನು ಮೀರಿದರೆ ಹೀಗೇ ಆಗುವುದು..'

'ನಾನೂ ಹೇಳಿದೆ, ನೇರವಾಗಿ ಕೇಳು ಯಾಕೆ ಮಾತಾಡ್ತಿಲ್ಲ ಅಂತ ಕಾರಣ ತಿಳಿಯುತ್ತೆ , ಹೀಗೆ ಕೊರಗುವ ಪ್ರಮೇಯವಿಲ್ಲ ಅಂತ ಸಲಹೆ ಕೊಟ್ಟೆ, ಅದೇಕೋ ಅವಳು ನಿನ್ನನ್ನು ಸಮೀಪಿಸಿಲ್ಲ ಈ ವಿಷಯವಾಗಿ'

* * * *

ಐದು ಗಂಟೆಯಾಗುತ್ತಲೇ ರೋಗಿಯನ್ನು ಒಬ್ಬೊಬ್ಬರಾಗಿ ನೋಡಬಹುದು ಎಂಬ ಸೂಚನೆ ಬಂದಾಗ ನಾನೂ ಐಸಿಯು ಒಳಗೆ ಹೋದೆ.

'ಮಂದಾರ..' ಎದುರಿಗೆ ಸಿಕ್ಕ ನರ್ಸ್‌ನ್ನ ಕೇಳಲಾಗಿ 'ಬಲಗಡೆ ಎರಡನೇ ಬೆಡ್' ಎಂದಾಗ ಅತ್ತ ಸಾಗಿದೆ.

ಮೂಗು ಬಾಯಿಯೊಳಗೆಲ್ಲ ಟ್ಯೂಬ್ ಗಳು ಇತ್ತ ಸೊಂಟದ ಕೆಳಗಿನಿಂದಲೂ ಸಣ್ಣ ಸಣ್ಣ ಪೈಪ್‌ಗಳು, ಕೈಗೆಲ್ಲ ಪ್ಲಾಸ್ಟರ್. ಮುಖ ಗುರುತು ಸಿಗದಷ್ಟು ಬಾತಿದೆ. ಕಾಲುಗಳು ಎಲ್ಲೋ ಹೂತುಹೋಗಿವೆ. ಈ